ಸರ್ಕಾರಿ ಉಪಕರಣಗಾರ ಮತ್ತು ತರಬೇತಿ ಕೇಂದ್ರದ ಉಪ ಕೇಂದ್ರವನ್ನು ಪ್ರಾರಂಭಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

793 (1106) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಈ ರಾಜ್ಯದ ಅಕ್ರಮ ಸಾಗುವಳಿದಾರರ ಸಮಸ್ಯೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಅಕ್ರಮ ಸಾಗುಳಿದಾರರನ್ನು ಸಕ್ರಮಗೊಳಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ;

ಇ) ರಚನೆಯಾಗಿರುವ ಅಕ್ರಮ ಸಕ್ರಮ ಸಮಿತಿಗಳೆಷ್ಟು ; ಈ ಸಮಿತಿ ಚಿಕ್ಕಮಗಳೂರು ಜಿಲ್ಲೆಯ ಅರ್ಜಿದಾರರ ಸಂಖ್ಯೆ ಎಷ್ಟು ;

ಈ) ಈ ಗೋಮಾಳ ಜಮೀನಿನಲ್ಲಿರುವ ಅಕ್ರಮ ಸಾಗುವಳಿದಾರರ ಸಮಸ್ಯೆಗೆ ಸರ್ಕಾರ ಪರಿಹಾರ ಸೂತ್ರವೇನು ;

ಉ) ಚಿಕ್ಕಮಗಳೂರಿನ ವಿವಾದಿತ ಸಾಗುವಳಿ ಪ್ರದೇಶದಲ್ಲಿ ಕಂದಾಯ ಹಾಗೂ ಅರಣ್ಯ ಭೂಮಿ ಗಡಿ ಗುರುತಿಸುವ ಕಾರ್ಯ ಆಗಿದೆಯೇ ;

ಊ) ಹಾಗಿದ್ದಲ್ಲಿ, ಯಾವಾಗಿನಿಂದ ಈ ಕೆಲಸವನ್ನು ಕೈಗೆತ್ತಿಕೊಳ್ಳಲಾಗಿದೆ ;

ಋ) ಸಾರಗೋಡು ಮಸಗಲಿ ಅರಣ್ಯ ಒತ್ತುವರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಕಂದಾಯ ಕಾರ್ಯದರ್ಶಿಯವರ ಜಾಮದಾರ್ ನೀಡಿದ ವರದಿಯಲ್ಲಿರುವ ಅಂಶಗಳೇನು ;

ಎ) ಈ ವರದಿಯನ್ನು ಅನುಷ್ಟಾನಗೊಳಿಸಲಾಗಿದೆಯೇ ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಹೌದು.

ಆ) ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಎ ಮತ್ತು 94ಬಿ ಪ್ರಕಾರ ಒತ್ತುವರಿದಾರರ ಕುಟುಂಬವು ಹೊಂದಿರುವ ಜಮೀನು ಸೇರಿ ಒಟ್ಟು 4.38 ಎಕರೆ ಖುಷ್ಕಿ ಜಮೀನಿಗೆ ಸಮನಾದ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಅವಕಾಶವಿದೆ. ಈ ಉದ್ದೇಶಕ್ಕೆ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ಪ್ರತಿಯೊಂದು ತಾಲ್ಲೂಕಿಗೆ ರಚಿಸುತ್ತಿದ್ದು, ಈ ಸಮಿತಿಯು ನಿಯಮಾನುಸಾರ ಬಗರ್ ಹುಕುಂ ಸಾಗುವಳಿಯನ್ನು ಸಕ್ರಮಗೊಳಿಸಲು ಕ್ರಮ ಕೈಗೊಳ್ಳಲಾಗುತ್ತದೆ.

ಇ) ರಾಜ್ಯದಲ್ಲಿ ಈಗಾಗಲೇ 100 ತಾಲ್ಲೂಕುಗಳಿಗೆ ಅಕ್ರಮ ಸಕ್ರಮ ಸಮಿತಿಗಳನ್ನು ರಚಿಸಲಾಗಿದೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಅರ್ಜಿದಾರರ ಸಂಖ್ಯೆ
ನಮೂನೆ 50 ರಲ್ಲಿ 2940
ನಮೂನೆ 53ರಲ್ಲಿ 36156
ಒಟ್ಟು 39096

ಈ) ಪ್ರಸ್ತುತ ಸರ್ಕಾರದ ಸುತ್ತೋಲೆ ಸಂ: ಆರ್‌ಡಿ 83 ಎಲ್‌ಜಿಪಿ 2006 ದಿ: 05.01.2007ರಂತೆ ಭೂ ಕಂದಾಯ ನಿಯಮ 97 (1)ರ ಪ್ರಕಾರ ನಿರ್ಧಿಷ್ಟಪಡಿಸಿರುವ ವಿಸ್ತೀರ್ಣಕ್ಕಿಂತ ಹೆಚ್ಚಾಗಿರುವ ಗೋಮಾಳ ಜಮೀನಿನಲ್ಲಿ ಬಗರ್ ಹುಕುಂ ಸಾಗುವಳಿ ಮಾಡಿರುವ ಪ್ರಕರಣಗಳನ್ನು ಭೂ ಕಂದಾಯ ಕಾಯ್ದೆ ಕಲಂ 94ಎ ಮತ್ತು 94ಬಿ ಮೇರೆಗೆ ಸಕ್ರಮಗೊಳಿಸಲಾಗುತ್ತಿದೆ.

ಉ) ಜಿಲ್ಲೆಯ ಹಲವಾರು ಸರ್ವೆ ನಂಬರ್‌ಗಳಲ್ಲಿ ಭಾಗಶಃ ಅರಣ್ಯ ಹಾಗೂ ಕಂದಾಯ ಜಮೀನುಗಳಿದ್ದು, ಅರಣ್ಯ ಹಾಗೂ ಕಂದಾಯಾಧಿಕಾರಿಗಳ ಜಂಟಿ ಸರ್ವೆ ಹಾಗೂ ಸರ್ವೆ ಆಫ್ ಇಂಡಿಯಾದ ಸರ್ವೆಯಿಂದ ಗಡಿ ಗುರುತಿಸುವ ಕಾರ್ಯ ನಡೆಸಲಾಗುತ್ತಿದೆ. ಮೂಡಿಗೆರೆ ತಾಲ್ಲೂಕು ಸಾರಗೋಡು ಮತ್ತು ಚಿಕ್ಕಮಗಳೂರು ತಾಲ್ಲೂಕು ಮಸಗಲಿ ಮೀಸಲು ಅರಣ್ಯಗಳ ಗಡಿ ಗುರುತಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ.

ಊ) ಸಾರಗೋಡು ಮೀಸಲು ಅರಣ್ಯಕ್ಕೆ ಸಂಬಂಧಿಸಿದಂತೆ 2003ನೇ ಸಾಲಿನಿಂದ ಸರ್ವೆ ಕಾರ್ಯ ನಡೆದಿದ್ದು, ವಿವಾದಗಳ ಹಿನ್ನೆಲೆಯಲ್ಲಿ ಪುನರ್ ಸರ್ವೆ ಕಾರ್ಯ ನಡೆಸಲಾಗುತ್ತಿದೆ. ಮಸಗಲಿ ಮೀಸಲು ಅರಣ್ಯದ ಸರ್ವೆ ಕಾರ್ಯವನ್ನು 2007ನೇ ಜನವರಿಯಲ್ಲಿ ಪ್ರಾರಂಭಿಸಲಾಗಿದೆ.

ಋ) ಡಾ: ಜಾಮ್‌ದಾರ್‌ರವರ ವರದಿಯಲ್ಲಿ ಸಾರಗೋಡು, ಮಸ್ಕಲಿ ಅಭಯಾರಣ್ಯದಿಂದ ಹೊರದೂಡಲ್ಪಟ್ಟವರಿಗೆ ಹಂಚಿಕೆ ಮಾಡಿದ ಭೂಮಿಯಲ್ಲಿ ಮನೆ ಕಟ್ಟಿಕೊಳ್ಳಲು ಮತ್ತು ಈಗಾಗಲೇ ಮನೆ ಕಟ್ಟಿಕೊಂಡಿದ್ದಲ್ಲಿ ಅವರಿಗೆ ನೀರಿನ ಸೌಲಭ್ಯ ಒದಗಿಸಲು ಮೆಸ್ಕಾಂನಿಂದ ಕುಟೀರ ಜ್ಯೋತಿ, ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಒದಗಿಸಲು, ಅವರಿಗೆ ಹಂಚಿಕೆ ಮಾಡಿರುವ ಜಮೀನಿನಲ್ಲಿ ಮರದ ಬುಡಗಳನ್ನು ತೆಗೆದು ಅವುಗಳನ್ನು ಸಾಗುವಳಿ ಜಮೀನುಗಳನ್ನಾಗಿ ಮಾಡಿಕೊಳ್ಳಲು, ಅವರಿಗೆ ಸಾಲ/ಹಣ ಮಂಜೂರಿಯನ್ನು ಮುಂದಿನ 7 ವರ್ಷಗಳಿಗೆ ಕಾಫಿ ಬೆಳೆಯುವ ಉದ್ದೇಶಕ್ಕಾಗಿ ಕೊಡಿಸಬಹುದೆಂಬ ಶಿಫಾರಸ್ಸು ಮಾಡಿದ್ದಾರೆ. ಅನಂತರ 1980ಕ್ಕೆ ಹಿಂದೆ ಇದ್ದ ಅರಣ್ಯ ಜಮೀನುಗಳಲ್ಲಿ ಆಗಿರುವ ಒತ್ತುವರಿಯನ್ನು ಹಳೆಯ ಸರ್ಕಾರದ ಆದೇಶಗಳಂತೆ ಸಕ್ರಮಗೊಳಿಸಲು ಮತ್ತು ಅರಣ್ಯ ಇಲಾಖೆಯು ಕಂದಾಯ ಇಲಾಖೆಗೆ ವರ್ಗಾಯಿಸಿರುವ 22,000 ಎಕರೆ ಜಮೀನನ್ನು ಅರಣ್ಯ ಜಮೀನಿನಿಂದ ಬಿಟ್ಟುಕೊಡುವ ಸಲುವಾಗಿ ಸೂಕ್ತ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಹಾಗೂ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಲು ಶಿಫಾರಸ್ಸು ಮಾಡಿದ್ದಾರೆ.

ಎ) ವರದಿಯನ್ನು ಅವರು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರವು ಇದನ್ನು ಅನುಷ್ಠಾನಗೊಳಿಸುವ ಬಗ್ಗೆ ಇನ್ನೂ ತೀರ್ಮಾನ ತೆಗೆದುಕೊಳ್ಳಬೇಕಾಗಿದೆ.

794 (1107) ಶ್ರೀ ರವಿ ಸಿ.ಟಿ. (ಚಿಕ್ಕಮಗಳೂರು): ಮಾನ್ಯ ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅನುಮತಿ ಪಡೆದಿರುವ ಲಾಟರಿ ಉದ್ಯಮಗಳ ಸಂಖ್ಯೆ ಎಷ್ಟು ;

ಆ) ಯಾವ, ಯಾವ ರಾಜ್ಯಗಳ ಲಾಟರಿ ವಹಿವಾಟಿಗೆ ರಾಜ್ಯದಲ್ಲಿ ಅವಕಾಶ ನೀಡಲಾಗಿದೆ ;

ಇ) ಇವುಗಳಲ್ಲಿ ಆನ್‌ಲೈನ್ ಮತ್ತು ಒಂದಂಕಿ ಲಾಟರಿಗಳು ಎಷ್ಟು ;

ಈ) ಲಾಟರಿ ಉದ್ಯಮದಿಂದ ಸರ್ಕಾರಕ್ಕೆ ಬರುತ್ತಿರುವ ವಾರ್ಷಿಕ ವರಮಾನವೆಷ್ಟು ;

ಉ) ಲಾಟರಿ ವ್ಯಾಪಾರದಿಂದ ಸಾಮಾಜಿಕ ಮತ್ತು ಆರ್ಥಿಕ ದುಷ್ಪರಿಣಾಮವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಊ) ಸರ್ಕಾರ ಲಾಟರಿ ಉದ್ಯಮವನ್ನು ನಿಷೇಧಿಸಲು ಉದ್ದೇಶಿಸಿದೆಯೇ ; ನಿಷೇಧದಿಂದ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟ ಎಷು ?

ಶ್ರೀ ರಾಮಚಂದ್ರಗೌಡ (ಯೋಜನೆ, ಸಣ್ಣ ಉಳಿತಾಯ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು):

ಅ) ಲಾಟರಿ (ರೆಗ್ಯುಲೇಷನ್) ಆಕ್ಟ್ 1998ರನ್ವಯ ಕೇವಲ ರಾಜ್ಯ ಸರ್ಕಾರಗಳು ಮಾತ್ರ ಲಾಟರಿಯನ್ನು ನಡೆಸಬಹುದಾಗಿದೆ. ಆದ್ದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಆ) ಲಾಟರಿ (ರೆಗ್ಯುಲೇಷನ್) ಆಕ್ಟ್ 1998ರನ್ವಯ ಪ್ರತ್ಯೇಕ ಅನುಮತಿ ಅಗತ್ಯವಿರುವುದಿಲ್ಲ. ಪ್ರಸ್ತುತ ಕರ್ನಾಟಕದಲ್ಲಿ ಸಿಕ್ಕಿಂ, ನಾಗಾಲ್ಯಾಂಡ್, ಅರುಣಾಚಲ ಪ್ರದೇಶ ರಾಜ್ಯಗಳ ಹಾಗೂ ರಾಯಲ್ ಗೌರ್ನಮೆಂಟ್ ಆಫ್ ಭೂತಾನ್ ಸರ್ಕಾರದ ಲಾಟರಿ ಟಿಕೇಟುಗಳು ಮಾರುಕಟ್ಟೆ ಏಜೆಂಟರುಗಳ ಮುಖಾಂತರ ಮಾರಾಟವಾಗುತ್ತಿವೆ.

ಇ) ಪ್ರತಿದಿನ ವಿವಿಧ ರಾಜ್ಯ ಸರ್ಕಾರಗಳು 41–43 ಆನ್‌ಲೈನ್ ಲಾಟರಿ ಡ್ರಾಗಳನ್ನು ನಡೆಸುತ್ತಿವೆ. ಲಾಟರಿ (ರೆಗ್ಯುಲೇಷನ್) ಆಕ್ಟ್ 1998ರನ್ವಯ ಒಂದಂಕಿ ಲಾಟರಿಯನ್ನು ನಡೆಸುವಂತಿಲ್ಲ.

ಈ) ಲಾಟರಿ ಉದ್ಯಮದಿಂದ 2006–07 (ಏಪ್ರಿಲ್ 2006ರಿಂದ ಡಿಸೆಂಬರ್ 2006ರ ಅಂತ್ಯದವರೆಗೆ)ನೇ ಸಾಲಿನಲ್ಲಿ ಸರ್ಕಾರಕ್ಕೆ ರೂ. 34.30 ಕೋಟಿ ನಿವ್ವಳ ಆದಾಯ ಬಂದಿರುತ್ತದೆ. ತೆರಿಗೆ ರೂಪದಲ್ಲಿ 2006–07 (ಏಪ್ರಿಲ್ 2006ರಿಂದ ಜನವರಿ 2007ರವರೆಗೆ)ನೇ ಸಾಲಿಗೆ ರೂ. 103.40 ಕೋಟಿ ವರಮಾನ ಬಂದಿರುತ್ತದೆ.

ಉ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.